ದಿನ ಆಯ್ತು. ಇನ್ನೇನು ನಿನ್ನ ಸರ್ವೀಸು ಮುಗಿತಾ ಬಂದಿರ್ಬೇಕು. ನಿನ್ಗೇನು ಬಿಡಪ್ಪ ರಿಟೈರ್ ಆದ್ರೂ ಜುಂ ಅಂತ ಪೆನ್ಷನ್ ಎಣಿಸಿಕಂಬ್ತೀಯ. ನಮ್ಮಂಗೆ ಬಿಸ್ಲು ಗಾಳಿಗೆ ಬೀಳೋದೇನೈತೆ'' ಎಂದು ಕುಯ್ದಿದ್ದ. ''ಮಳೆ ಏನಾದ್ರೂ ಬಿತ್ತಾ. ಅಂದಂಗೆ ನಮ್ಗೆ ಪ್ರೈಮರಿ ಸ್ಕೂಲಲ್ಲಿ ಮೇಷ್ಟ್ರಾಗಿದ್ರಲ್ಲ ದೊಡ್ಡಸಳ್ಳಿ ಮಹದೇವಪ್ಪ ಮೇಷ್ಟ್ರು ಹೆಂಗವ್ರೆ?'' ಎಂದು ಕೇಳಿದ್ದ ಪೆಂಚಾಲಯ್ಯ. ''ಅದೇನಪ್ಪ ಇದ್ದಕ್ಕಿದ್ದಂಗೆ ಮಹದೇವಪ್ಪ ಮೇಷ್ಟ್ರು ನೆನಪಾದ್ರು. ಏನಾದ್ರೂ ಸನ್ಮಾನ ಗಿನ್ಮಾನ ಇಟ್ಕಂತಿಯೇನು. ಎಂಬತ್ತೈದು ವರ್ಷ. ಮೊನ್ಮೊನ್ನೆವರ್ಗೂ ಗಟ್ಟಿಯಾಗೇ ಇದ್ರು. ಈಗ ಎದ್ದು ಓಡಾಡೋಕಾಗಲ್ಲ. ಮೊನ್ನೆ ದೊಡ್ಡಸಳ್ಳೀಲಿ ಅವ್ರ ಮನೆ ಮುಂದೆ ರೋಡ್ ರಿಪೇರಿ ಕಂಟ್ರಾಕ್ಟು ನಾನೇ ತಗಂಡಿದ್ದೆ. ನಾನೂ ಮಾತಾಡಿಸ್ಕಂಡ್ ಬಂದೆ. ನೆನಪಿನ ಶಕ್ತಿ ಇಂಗೋಗೈತೆ. ಇನ್ನ ದೃಷ್ಟಿನೂ ಅಷ್ಟೇ ಯಾರಾದ್ರೂ ಒಬ್ರು ಜೊತೆಗಿದ್ರೇನೆ.'' ಎಂದಿದ್ದ. ''ಸಾಧ್ಯವಾದರೆ ಭಾನುವಾರ ಊರಿಗೆ ಬರ್ತೀನಿ, ಸಿಗ್ತೀನಿ.'' ಎಂದು ಫೋನಿಟ್ಟು ಸದ್ಯ ಮೇಷ್ಟ್ರು ಬದುಕಿದಾರಲ್ಲ ಎಂದು ನಿಟ್ಟುಸಿರು ಬಿಟ್ಟ ಪೆಂಚಾಲಯ್ಯ ದೇವೇಗೌಡನ ಬಳಿ ಹೋಗಿ ಎಲ್ಲವನ್ನೂ ಹೇಳಿ ಖುಷಿಪಟ್ಟ. ದೇವೇಗೌಡನೂ ಖುಷಿಯಿಂದ ಪ್ಯಾಂಟ್ ಜೇಬಿಗೆ ಕೈ ಹಾಕಿಕೊಂಡು, ''ಪೆಂಚಾಲ್ ಇವೊತ್ತು ನಂದೇ ಪಾರ್ಟಿ. ಎಲ್ರೂ ಖುಷಿಯಿಂದ ಮನೆಗೆ ಹೋಗ್ಬೇಕು, ನಡಿ ಕಾಣಿಕ್ಯರಾಜು ಇದಾರ ನೋಡೋಣ.'' ಎಂದು ಪೆಂಚಾಲಯ್ಯನ ಕೈಹಿಡಿದು ಎಳೆದುಕೊಂಡು ಕಾಣಿಕ್ಯರಾಜುನ ಸೀಟಿನ ಹತ್ತಿರ ಹೋಗಿದ್ದ. ವಿಷಯ ತಿಳಿದು ಕಾಣಿಕ್ಯರಾಜು ಕೂಡಾ ಖುಷಿಪಟ್ಟು ಮಾಳಿಗಚಾರಿಯ ಫೋನ್ ನಂಬರ್ ಉಜ್ಜಿ ಸೇಮ್ ನಿನ್ನೆ ಸೇರಿದ ಜಾಗಕ್ಕೆ ತಪ್ಪದೆ ಬರಲೇಬೇಕೆಂದು ಪ್ರೀತಿಯ ಆಗ್ರಹ ತೋರಿಸಿದ್ದ. ನಿನ್ನೆಯಂತೆಯೇ ಡ್ರಿಂಕ್ಸ್ ಮತ್ತು ಪೋರ್ಕ್ ಸಮಾರಾಧನೆಯಾಗಿತ್ತು. ನಿನ್ನೆ ಚಿಂತೆ ತುಂಬಿಕೊಂಡ ಪಾರ್ಟಿಯಾಗಿದ್ದರೆ, ಇವೊತ್ತು ಖುಷಿ ಮತ್ತು ಸಡಗರ ತುಂಬಿಕೊಂಡ ಪಾರ್ಟಿಯಾಗಿತ್ತು. ಆದರೆ, ನಿನ್ನೆಗಿಂತ ಇವೊತ್ತು ಡ್ರಿಂಕ್ಸ್ ಮತ್ತು ಐಟಂ ಎರಡೂ ಎಲ್ಲರಿಗೂ ಜಾಸ್ತಿಯಾಗಿದ್ದವು. ಮಾಳಿಗಚಾರಿಯನ್ನು ಮೂವರೂ ಹೊಗಳಿ ಹೊಗಳಿ ಹೊನ್ನಶೂಲಕ್ಕೆ ಏರಿಸಿದ್ದರು! ನಾಡಿದ್ದು ಭಾನುವಾರ ಊರಿಗೆ ಹೋಗಲು ಟೇಬಲ್‌ನಲ್ಲಿಯೇ ನಿರ್ಧರಿಸಿದ್ದನು ಪೆಂಚಾಲಯ್ಯ.

ಭಾನುವಾರ ಮಧ್ಯಾಹ್ನ ಒಂದು ಗಂಟೆಗೆ ಊರು ತಲುಪಿದ ಪೆಂಚಾಲಯ್ಯ ಊಟ ಮಾಡಿಕೊಂಡು ತಿಪ್ಪೇರಂಗಯ್ಯನ ಜೊತೆ ಮೋಟಾರ್ ಸೈಕಲ್ ಮೇಲೆ ದೊಡ್ಡಸಳ್ಳಿಯ ಕಡೆ ಹೊರಟ. ''ಇದ್ದಕ್ಕಿದ್ದಂಗೆ ಏನಪ್ಪ ಮೇಷ್ಟ್ರು ಮೇಲೆ ಇಷ್ಟೊಂದು ಪ್ರೀತಿ ಬಂದುಬಿಟ್ಟೈತೆ.'' ಎಂದು ತಮಾಷೆ ಮಾಡಿದ್ದ ತಿಪ್ಪೇರಂಗಯ್ಯ. ಹಾಗೆ ನೋಡಿದರೆ ಪೆಂಚಾಲಯ್ಯ ಮಹದೇವಪ್ಪ ಮೇಷ್ಟ್ರುನ ನೋಡಿ ಸುಮಾರು ಇಪ್ಪತ್ತೈದು ವರ್ಷಗಳೇ ಆಗಿದ್ದವೇನೋ. ಯಾವಾಗಲೋ ಒಮ್ಮೆ ಊರಿಗೆ ಹೋಗಿದ್ದಾಗ ಆವೊತ್ತು ದೊಡ್ಡಸಳ್ಳಿಯ ಹೂವಿನ ತೇರೂ ಇತ್ತು. ಹಾಗೆ ಹೋದಾಗ ಮಹದೇವಪ್ಪ ಮೇಷ್ಟ್ರು ಸಿಕ್ಕಿದ್ದರು. ತಾನು ಸರ್ಕಾರಿ ನೌಕರಿಯಲ್ಲಿರುವುದು ತಿಳಿದು ತುಂಬಾ ಖುಷಿಪಟ್ಟಿದ್ದರು. ಮುದ್ದಯ್ಯನಪಾಳ್ಯದ ವೆಂಕಟಾಚಲಪ್ಪನ ಹೋಟೆಲ್ಲಿಗೆ ಕರೆದುಕೊಂಡು ಹೋಗಿ ಬಿಸಿಬಿಸಿ ಪಕೋಡ ಮತ್ತು ಟೀಯನ್ನು ಕೊಡಿಸಿದ್ದ. ಮಹದೇವಪ್ಪ ಮೇಷ್ಟ್ರುಗೆ ಆಗಿನ್ನೂ ಆರು ತಿಂಗಳು ಮಾತ್ರ ಸರ್ವೀಸ್ ಇತ್ತು. ಮತ್ತು ಗಟ್ಟಿಯಾಗಿಯೇ ಇದ್ದರು. ಹದಿನೈದು ನಿಮಿಷಗಳ ಬೈಕ್ ರೈಡ್ ಮಾಡಿ ತಿಪ್ಪೇರಂಗಯ್ಯನು ಪೆಂಚಾಲಯ್ಯನನ್ನು ದೊಡ್ಡಸಳ್ಳಿಯ ಮಹದೇವಪ್ಪ ಮೇಷ್ಟ್ರ ಮನೆಯ ಮುಂದೆ ಇಳಿಸಿದ್ದ. ''ಮಾತಾಡ್ತ ಇರು, ನಾನು ಪಂಚಾಯ್ತಿ ಆಫೀಸಿನ್ತಾವ ಇರ್ತೀನಿ. ಮುಗಿದ ತಕ್ಷಣ ಫೋನ್ ಮಾಡು, ಬಂದ್ಬಿಡ್ತೀನಿ.'' ಎಂದು ಹೇಳಿ ತಿಪ್ಪೇರಂಗಯ್ಯನು ಮೋಟಾರು ಬೈಕ್ ಮೇಲೆ ಮಾಯವಾದ. ಹಣ್ಣು ಹಂಪಲಿನ ಬ್ಯಾಗು ಹಿಡಿದು ಪೆಂಚಾಲಯ್ಯ ಮೇಷ್ಟ್ರ ಮನೆಯಲ್ಲಿ ಕಾಲಿಟ್ಟಾಗ ಮೇಷ್ಟ್ರು ಮಂಚದ ಮೇಲೆ ರಗ್ಗನ್ನು ತಲೆತುಂಬಾ ಗುಬರಾಕಿಕೊಂಡು ಮಲಗಿದ್ದರು. ಹತ್ತನ್ನೆರಡು